# ಡಾ|| ಎಸ್.ಎಲ್.ಭೈರಪ್ಪ



ಶತಮಾನದ ಶ್ರೇಷ್ಠ ಕನ್ನಡ ಕಾದಂಬರಿಕಾರ ಡಾ|| ಎಸ್.ಎಲ್.ಭೈರಪ್ಪ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರ ಗ್ರಾಮದವರೆಂದು ಹೇಳಿಕೊಳ್ಳುವ ಹೆಮ್ಮೆ ನಮ್ಮದು.

ಭಾರತೀಯ ಸಾಹಿತ್ಯದಲ್ಲಿ ಬಹುದೊಡ್ಡ ಹೆಸರು ಮಾಡಿರುವ ಡಾ|| ಎಸ್.ಎಲ್.ಭೈರಪ್ಪನವರು ಶ್ಯಾನುಭೋಗರಾಗಿದ್ದ ಲಿಂಗಣ್ಣಯ್ಯ ಮತ್ತು ಗೌರಮ್ಮನವರ ಪುತ್ರರಾಗಿ 26-7-1934 ರಲ್ಲಿ ಜನಿಸಿದರು. ಕುಟುಂಬದಲ್ಲಿ ಸೋದರ,ಸೋದರಿ,ತಂದೆ-ತಾಯಿಗಳ ಸಾವಿನ ನೋವನ್ನು ಅನುಭವಿಸಿ ಕಷ್ಟದಿಂದ, ನೋವಿನಿಂದ ಶಿಕ್ಷಣ ಪಡೆದರು. ಚಿಂತಕರ,ಸಾಹಿತಿಗಳ ಒಡನಾಟ, ಪ್ರೋತ್ಸಾಹ. ಪ್ರೀತಿ,ವಿಶ್ವಾಸಗಳಿಸಿ ನುಗ್ಗೇಹಳ್ಳಿ, ಗೊರೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ನಾಟಕ, ಸಾಹಿತ್ಯದ ಗೀಳು ಅಂದಿನಿಂದಲೇ ಅಂಟಿಸಿಕೊಂಡ ಡಾ||ಭೈರಪ್ಪ ಶ್ರೇಷ್ಠ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರ ಶಿಷ್ಯರಾದರು. ಅಂದಿನ ಸಮಾಜದ ಜಾತಿ ವ್ಯವಸ್ಥೆ, ಕ್ರೌರ್ಯ,ದೌರ್ಜನ್ಯದ ಬಗ್ಗೆ ಸಿಡಿದೆದ್ದರು.ಎಸ್.ಎಲ್.ಭೈರಪ್ಪ ಚನ್ನರಾಯಪಟ್ಟಣದ ನವೋದಯ ಶಾಲೆಯಲ್ಲಿ ಪ್ರೌಢಶಾಲೆ ಅಭ್ಯಾಸ,ವಾರಾನ್ನ ಊಟ,ಚಿತ್ರ ಮಂದಿರದಲ್ಲಿ ಗೇಟ್ ಹತ್ತಿರ ಕೆಲಸ ಮಾಡಿದರು. ಇಲ್ಲಿನ ದಬ್ಬಾಳಿಕೆ ಸಹಿಸದೆ ಮೈಸೂರಿನಲ್ಲಿ ಶಿಕ್ಷಣಕ್ಕೆ ಮುಂದಾದರು. ನಂತರದ ದಿನಗಳಲ್ಲಿ ಮಿಲಿಟರಿ ಸೇರುವ ಆಸೆ,ಜೈಲುವಾಸ,ರೈಲಿನಲ್ಲಿ ಟಿಕೇಟ್ ಇಲ್ಲದೆ ಪ್ರಯಾಣ, ಸಾಧುವಾಗುವ ಆಸೆ, ಎಲ್ಲದರ ನಂತರ ಮೈಸೂರಿಗೆ ಬಂದು ಅಧ್ಯಯನಶೀಲರಾಗಿ ಜಟ್ಟಿ ಮತ್ತು ಮಟ್ಟಿ ಕಾದಂಬರಿ ರಚಿಸುತ್ತಾರೆ. ಭೀಮಕಾಮ ಕಾದಂಬರಿ ಗತಜನ್ಮ ಕಥೆಯನ್ನು ರಚಿಸಿದರು. ಹುಬ್ಬಳಿಯಲ್ಲಿ 1958 ರಲ್ಲಿ ಅಧ್ಯಾಪಕ ಹುದ್ದೆ,1958 ರಲ್ಲಿ ವಿವಾಹವಾಯಿತು. ಅನಂತರದ ದಿನಗಳಲ್ಲಿ ಅವರಿಂದ ರಚಿತವಾಗಿ ಹೊರಬಂದ ಧರ್ಮಶ್ರೀ,ದೂರ ಸರಿದರು,ಮತದಾನ, ವಂಶವೃಕ್ಷ, ಜಲಪಾತ, ನಾಯಿನೆರಳು, ಕವಲು ಹೀಗೆ ಕೃತಿಗಳು ಹೊರಬಂತು. ಸಾಹಿತ್ಯ ಭಂಡಾರ

ಇವರ ಎಲ್ಲಾ ಕೃತಿಗಳನ್ನು ಪ್ರಕಟಿಸುವ ಜವಬ್ದಾರಿ ಹೊತ್ತಿದೆ. ಸಾಹಿತ್ಯಾಸಕ್ತರನ್ನು ಸೆಳೆಯುವ ಮೋಡಿ ಸಮಾಜಕ್ಕೆ ಚಾಟಿ ಏಟು ನೀಡುವ ಶೈಲಿಯಿಂದ ಹೆಸರಾದ ಭೈರಪ್ಪನವರ ಕೃತಿಗಳು, ಚಿಂತನ ಗ್ರಂಥಗಳು, ತೆಲುಗು, ಮರಾಠಿ, ಹಿಂದಿ,ಉರ್ದು, ಇಂಗ್ಲೀಷ್ ಸೇರಿ 14 ಭಾಷೆಗಳಿಗೆ ತರ್ಜುಮೆಯಾಗಿದೆ. ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ರಾಜ್ಯೋತ್ಸವ ಪ್ರಶಸ್ತಿ, ಗ್ರಂಥಲೋಕ ಪ್ರಶಸ್ತಿ ಸೇರಿದಂತೆ ಹಲವು ಗೌರವಕ್ಕೆ ಪಾತ್ರರಾಗಿದ್ದಾರೆ. 1999 ರ 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು. 77ರ ಹರೆಯ ಡಾ॥ ಭೈರಪ್ಪ ಅವರ ಹೆಸರು ವಿಶೇಷ. ಇವರ ಕುಟುಂಬದ ಮನೆದೈವ ಭೈರಾದೇವರಿಂದ ಬಂದ ಹೆಸರು. ದಿಟ್ಟ-ನೇರ ವಿವಾದದ ನಡುವೆ ನಾಡಿನ ಅಗ್ರ ಪಂಕ್ತಿಯ ಡಾ॥ ಭೈರಪ್ಪ ನಮ್ಮ ತಾಲ್ಲೂಕಿನವರು ಎಂಬುದು ನಮ್ಮ ಹೆಗ್ಗಳಿಕೆ.